ವಾರಿಜಕ್ಕ ಗುಟ್ಟಾಗಿ ಬಂದು, 'ದಾವಣಗೆರೆಗೆ ಹೋಗಿ ದೊಡ್ಡಾಸ್ಪತ್ರೆಗೆ ತೋರಸಿ' ಎಂದು ವಿಳಾಸವನ್ನೂ ಕೊಟ್ಟಳು. ಆದರೆ ದುಡ್ಡು.. ಮಾದೇವಿ ಗೌಡರ ಮನೆಯಲ್ಲಿ ಮುಂಗಡ ಕೇಳಿದಳು. 'ಕೆಲಸಕ್ಕ ರಜಾ ಮಾಡವ್ಳೆ. ಮತ್ತೆ ಮುಂಗಡ ಕೇಳ್ತವ್ಳೆ. ಗೌಡರು ಊರಲ್ಲಿಲ್ಲ. ನಾಳೆ ಬಾ ಅಂತ ಯೋಳು'ಎಂದು ಮಗಳ ಬಳಿ ಹೇಳಿ ಕಳಿಸಿದರು ಗೌಡತಿ. ಕಾಯುವಷ್ಟು ಸಮಯವಿರಲಿಲ್ಲವಲ್ಲ. ನಂಜುಂಡ ದೇವಪ್ಪನನ್ನೂ ಕರೆದುಕೊಂಡು ಸೋಜಪ್ಪನ ಬಳಿ ಬಂದು ಸಮಾಚಾರ ಹೇಳಿದ. 'ಒಂದ ಐನೂರು ರೂ. ಕೊಡಿ ಸಾಕು'ಎಂದ. ಅವರು 'ಆಸ್ಪತ್ರೆ ಎಂದರೆ ಐನೂರೆಲ್ಲಿ ಸಾಕಾಗುತ್ತೆ? ಐದು ಸಾವಿರ ಇಟ್ಕೊಂಡಿರು. ಉಳದ್ರೆ ವಾಪಸ್ಸು ಕೊಡುವಿಯಂತೆ'ಎಂದರು. ಆ ಕ್ಷಣದಲ್ಲಿ ಅವರು ಏಸುಸ್ವಾಮಿಯಂತೇ ಕಂಡರು ನಂಜುಂಡನಿಗೆ. ದಾವಣಗೆರೆಗೆ ಕರೆದೊಯ್ದು ತೋರಿಸಿದ್ದಾಯಿತು. ಅಲ್ಲೂ ಎರಡು ದಿನ ಇಟ್ಕೊಂಡು ರಕ್ತ ಪರೀಕ್ಷೆ ಮಾಡಿಸಿ ಸೂಜಿ ಹಾಕಿದರು.

ಬಸನಿಂಗ ಓಡಿ ಬಂದ. ಎರಡು ದಿನ ಅವ್ವನನ್ನು ಬಿಟ್ಟು ಅಲುಗಾಡಲಿಲ್ಲ. ಅವನನ್ನು ನೋಡಿಯೇ ಜ್ವರ ಇಳಿಯಿತೊ.. ಅಥವಾ ಔಷಧಿಯ ಪರಿಣಾಮವೋ.. ಗೊತ್ತಿಲ್ಲ. ಅಂತೂ ಮಾದೇವಿ ಹುಶಾರಾದಳು. ಮೂರು ಸಾವಿರ ಖರ್ಚಾಗಿತ್ತು. ತಿರುಗಿ ಹಳ್ಳಿಗೆ ಬಂದ ಮೇಲೆ ವಿಧೇಯರಾಗಿ ನಂಜುಂಡ, ದೇವಪ್ಪ ಸೋಜಪ್ಪರೆಡೆಗೆ ಬಂದರು. ಅವರೂ ಮೆಲುನಗುತ್ತ, 'ಅವಳು ಹುಶಾರಾಗ್ತಾಳೇಂತ ಗೊತ್ತಿತ್ತು. ಏಸು ಸ್ವಾಮಿ ದೊಡ್ಡೋನು'ಎಂದರು. 'ಎರಡು ಸಾವ್ರ ಉಳಿದೈತೆ. ಮಿಕ್ಕ ಮೂರು ಸಾವ್ರಾನಾ ಕೆಲಸಾ ಸಿಕ್ಕ ತಕ್ಷಣ ಕೊಡ್ತೀನಿ'ಎಂದ ನಂಜುಂಡ. ಅವರೂ, 'ಪರವಾಗಿಲ್ಲ. ಅನುಕೂಲವಾದಾಗ ಕೊಡು. ತೊಂದರೆ ಮಾಡ್ಕೊಂಡು ಕೊಡ್ಬೇಡ'ಎಂದರು. ಮುಂದೆ ಅವರು ಸುಮ್ಮನಿರುವುದನ್ನು ನೋಡಿದ ದೇವಪ್ಪ ಚಿಕ್ಕ ಮಕ್ಕಳಂತೆ 'ಬಕ್ಷೀಸು'ಎಂದ. ಅವರು ನಗುತ್ತ ಇಪ್ಪತ್ತು ರೂಪಾಯಿ ತೆಗೆದು ಕೈಲಿಟ್ಟರು. ಚರ್ಚಿನೊಳಗೆ ಕರೆದೊಯ್ದರು. ಇವರು ಏಸು ಸ್ವಾಮಿಗೆ ಕೈಮುಗಿದು ಹೊರಟಾಗ, 'ಹಾಗಲ್ಲ.. ಹೀಗೆ' ಎಂದು ತೋರಿಸಿಕೊಟ್ಟರು. ಇಬ್ಬರೂ ಅದೇ ರೀತಿಯಲ್ಲಿ ಮಾಡಿ ಹೊರಟರು. ದಾರಿಯಲ್ಲಿ ದೇವಪ್ಪ ಸಾರಾಯಿ ಭಟ್ಟಿಗೆ ಎಳೆದೊಯ್ದ. ಮಾದೇವಿ ಮನೆಯಲ್ಲಿರುವುದರಿಂದ ನಂಜುಂಡನಿಗೆ ಕಳವಳ. 'ಮತ್ತೆ ಮತ್ತೆ ಹಿಂಗೆ ದುಡ್ಡು ಸಿಕ್ತಾತಾ? ಸುಮ್ಕಿರು'ಎಂದ ದೇವಪ್ಪ. ಇಬ್ಬರೂ ಪ್ಯಾಕೆಟ್ ಹಾಕಿಯೇ ಮನೆ ಸೇರಿದರು.

ಮಾದೇವಿ ಕಣ್ಣು ಕೆಂಪಗಾಗಿಸಿಕೊಂಡು ಬಂದ ಗಂಡನನ್ನು ನೋಡಿ ಅಚ್ಚರಿಗೊಂಡಳು, 'ಯಾಕ್ಲಾ ಮೂದೇವಿ? ಸಾರಾಯಿ ಕುಡ್ದು ಬಂದ್ಯಾ? ದುಡ್ಡೆಲ್ಲಿತ್ತು ನಿಂತಾವ?'ಎಂದು ಜೋರಾಗಿಯೇ ಕೇಳಿದಳು. ಅವನ ಹೊಟ್ಟೆಯೊಳಗಿದ್ದ ಪರಮಾತ್ಮ ನಿಜವನ್ನೇ ನುಡಿಸಿದ್ದ. 'ಯಾರು ದುಡ್ಡು ಕೊಡ್ತಾರೆ ಅನ್ಕಂಡೆ? ನಿಮ್ಮ ಗೌಡ್ತಿ ಕೊಟ್ರಾ? ಮೇಸ್ತ್ರಿ ಕೊಟ್ನಾ? ಸೋಜಪ್ಪ ಕೊಟ್ಟರು. ಕಷ್ಟಕಾಲದಲ್ಲಿ ಸಹಾಯ ಮಾಡೋರು ಅವರೇಯಾ' ಎಂದ. ಸತ್ಯ ಬಯಲಿಗೆ ಬಂದಿತ್ತು. ಮಾದೇವಿ ಅಚ್ಚರಿಯಿಂದ ಬಾಯಿ ತೆರೆದವಳು ಮುಚ್ಚಲೂ ಮರೆತಳು. ಆಗಲೇ ಬಸನಿಂಗನ ಪರೀಕ್ಷೆಯ ಫೀಸನ್ನೂ ಅವರೇ ಕೊಟ್ಟದ್ದೆಂಬ ಸಂಗತಿಯೂ ತಿಳಿಯಿತು. 'ಇದ್ಯಾಕೋ ಸರಿ ಬರಾಕಿಲ್ಲ. ಆ ವಾರಿಜಕ್ಕ.. ತಾನಂತೂ ಹೊಂಡದಲ್ಲಿ ಬಿದ್ದವ್ಳೆ. ನಿಮ್ಮನ್ನೂ ಎಳಕೋತವ್ಳೆ. ಸೋಜಪ್ಪ ಮೋಡಿ ಮಾಡವ್ರೆ. ಹಳ್ಳಿ ಜನ ನೋಡಿದ್ರೆ ಏನೆಂದಾರು? ಗುಡೀರವ್ವ ಮುನಿಸ್ಕೊಂಡ್ರೆ ನಮ್ ಕಥೆ ಅಷ್ಟೇಯಾ'ಎಂದು ತಲೆಗೆ ಕೈ ಹೊತ್ತು ಕುಳಿತಳು. ನಂಜುಂಡ, 'ಏನೇನೋ ಯೋಳ್ಬೇಡ ಮಾದೇವಿ. ಸೋಜಪ್ಪ ಭೋ ಒಳ್ಳೋರು. ದೊಡ್ಡ ಮನುಷ್ಯರು. ಗುಡೀರವ್ವ ಮುನಿಸ್ಕೊಳ್ಳೊಹಂಗೆ ನಾವೇನೂ ಮಾಡಿಲ್ಲ. ಸುಮ್ಕಿರು'ಎಂದು ಸೋಜಪ್ಪನನ್ನು ವರ್ಣಿಸಿದ್ದೇ ಬಂತು. ಮಾದೇವಿಗೆ ಚಿಂತೆ ಕಾಡತೊಡಗಿತು. ಸಾರಾಯಿಗೋಸ್ಕರ ಈ ಗೆಳೆಯರು ಏನೆಲ್ಲಾ ಮಾಡಬಹುದೆಂಬ ಸತ್ಯ ಅವಳಿಗೆ ಗೊತ್ತು. 'ಇನ್ನು ನನ್ನ ಕೇಳ್ದೇ ಅವರ ತಾವ ಓಗಬೇಡ ನೀನು' ಎಂದು ತಾಕೀತು ಮಾಡಿದಳು.

ಬಸನಿಂಗನ ಕೋರ್ಸು ಮುಗಿದು ಅವನಿಗೊಂದು ಕೆಲಸ ಸಿಕ್ಕಿದ್ದೂ ಆಯಿತು. ಬಂದು ತಾಯಿ,ತಂದೆಯರಿಗೆ ನಮಸ್ಕಾರ ಮಾಡಿದ. 'ಈಗ ಟ್ರೇನಿಂಗ್‌ನಲ್ಲಿ ಆರು ಸಾವ್ರ ಕೊಡ್ತಾರಂತೆ. ಕೆಲಸ ಕಾಯಮ್ಮಾದ ತಕ್ಷಣ ಹತ್ತು ಸಾವ್ರ ಕೊಡ್ತಾರೆ. ಕಷ್ಟಕಾಲ ಮುಗೀತು. ಆಮ್ಯಾಕೆ ನಾವೆಲ್ಲ ಆರಾಮಾಗಿರಬೋದು'ಎಂದು ಸಂತಸದಿಂದಲೇ ಹೇಳಿದ. ಇಬ್ಬರ ಮುಖವೂ ಅರಳಿ ಹೂವಾಯಿತು.